**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 456/2024

ಪಿಡಬ್ಲು :3 ಸಿಡಬ್ಲು :3

| | |
|---|---|
| ಸಾಕ್ಷಿಯ ಹೆಸರು | :ಶ್ರೀ.ಉಳವಪ್ಪ ಮುದಿನಾಯ್ಕರ |
| ಗಂಡನ ಹೆಸರು | :ಶ್ರೀ ಸೂರ್ಯನಾಯ್ಕ |
| ವಯಸ್ಸು | : 40 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ್ತವ್ಯ | : ಹಣ್ಣಿಕೇರಿ |
| ದಿನಾಂಕ | : 22-11-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

(ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು ವಿಡಿಯೋ ಕಾನ್ಫರೆನ್ಸ ಮುಖಾಂತರ ಹಿಂಡಲಗಾ ಕಾರಾಗೃಹ, ಬೆಳಗಾವಿಯಿಂದ ವಿಚಾರಣೆಗೆ ಹಾಜರುಪಡಿಸಿಕೊಳ್ಳಲಾಯಿತು. ಆರೋಪಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಆರೋಪಿಯಿಂದ ಖಾತರಿಪಡಿಸಿಕೊಂಡು ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಆರೋಪಿ ಪರ ವಕೀಲರ ಮತ್ತು ಸರ್ಕಾರಿ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.)

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1 ಫ್ರಾಸಾಃ 1 ಫಕೀರಪ್ಪ ಯರಗುದ್ದಿ ನನಗೆ ಗೊತ್ತಿರುತ್ತಾರೆ. ವಿಡಿಯೋ ಕಾನ್ಫರೆನ್ಸ ಮುಖಾಂತರ ವಿಚಾರಣೆಗೆ ಹಾಜರಾಗಿರುವ ಆರೋಪಿ ನಮ್ಮ ಊರಿನವರು, ಅವರನ್ನು ಊರಿನಲ್ಲಿ ನೋಡಿರುತ್ತೇನೆ ಆದರೆ ಅವರ ಹೆಸರು ನನಗೆ ಗೊತ್ತಿರುವುಲ್ಲ. ಚಾಸಾಃ2 ಫ್ರಾಸಾಃ 2 ಅದೃಶ್ಯಪ್ಪ ಇದ್ದಿ ನಮ್ಮ ಊರಿನವರು.

2. ನೇಸರಗಿ ಪೋಲಿಸರು ನನಗೆ ಪಂಚನಾಮೆಗೆ ಬರುವಂತೆ ಕರೆಸಿರಲಿಲ್ಲ. ಈಗ ಒಂದು ವರ್ಷಗಳ ಹಿಂದೆ ಪೋಲಿಸರು ಹಣ್ಣಿಕೇರಿ ಗ್ರಾಮ ಪಂಚಾಯಿತಿಯಲ್ಲಿ ನನ್ನ ಸಹಿ ಮಾಡಿಸಿಕೊಂಡಿದ್ದಾರೆ. ಪೋಲಿಸರು ನನ್ನನ್ನು ಮಲ್ಲೇಕನವರ ಓಣಿಗೆ ಕರೆದುಕೊಂಡು ಹೋಗಿ ಅಲ್ಲಿ ಪೋಟೊ ತೆಗೆದಿದ್ದಾರೆ. ಈಗ ಆ ಪೋಟೊ ನೋಡಿದರೆ ಗುರುತಿಸುತ್ತೇನೆ. ಪೋಟೊದಲ್ಲಿ ಸಾಕ್ಷಿ ತಮ್ಮ ಇರುವಿಕೆಯನ್ನು ಗುರುತಿಸಿದ್ದಾರೆ. ಆ ಪೋಟೊವನ್ನು ಮಲ್ಲೇಕನವರ ಓಣಿಯಲ್ಲಿ ಫಕೀರಪ್ಪ ವಿಭತಿ ಅವರ ಮನೆಯ ಹತ್ತಿರ ತೆಗೆದಿದ್ದಾರೆ ಎಂದು ಗುರುತಿಸಿದ್ದಾರೆ. ಆ ಪೋಟೊದಲ್ಲಿ ಕಾಣುವ ಇನ್ನೊಬ್ಬ ವ್ಯಕ್ತಿ ನಮ್ಮ ಊರಿನವರು ಎಂದು, ಆದರೆ ಅವರ ಹೆಸರು ನನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ಪೋಟೊವನ್ನು ಈಗಾಗಲೇ ನಿಪಿ– 3 ಎಂದು ಗುರುತಿಸಲಾಗಿದೆ. ಆ ಸ್ಥಳದಲ್ಲಿ ಪೋಟೊವನ್ನು ಯಾವ ಕಾರಣಕ್ಕೆ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ದಾಖಲೆಯನ್ನು ಈಗಾಗಲೇ ನಿಪಿ– 10 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ– 10[ಬಿ] ಎಂದು ಗುರುತಿಸಲಾಯಿತು. ನಿಪಿ– 10 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ವಸ್ತು ಜಪ್ತು ಮಾಡಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಪಂಚನಾಮೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲು: ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

ಪೋಲಿಸ ನೋಟಿಸಿನ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ನೋಟಿಸನ್ನು ನಿಪಿ–12 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–12 [ಎ] ಎಂದು ಗುರುತಿಸಲಾಯಿತು. ಪೋಲಿಸರು ನನಗೆ ಪಂಚನಾಮೆ ಮಾಡುವುದು ಇದೆ ಎಂದು ಹೇಳಿ

ಇದ್ಲಿಯವರ ಓಣಿ ಕರೆಸಿದ್ದರು ಎನ್ನುವುದಕ್ಕೆ ಸಾಕ್ಷಿ ಪೋಲಿಸರು ನನಗೆ ಮಲ್ಲೇಕನವರ ಓಣಿಗೆ ಕರೆಸಿ ಪೋಟೋವನ್ನು ತೆಗೆದಿದ್ದಾರೆ ಎಂದು ಹೇಳಿದ್ದಾರೆ. ಆ ಸಮಯದಲ್ಲಿ ಚಾಸಾಃ 1 ಫಕೀರಪ್ಪ ಅವರೂ ಸಹ ಇದ್ದರು ಎನ್ನುವುದು ಸರಿ. ಚಾಸಾಃ 1 ಫಕೀರಪ್ಪ ಅವರು ತಮ್ಮ ಬಸಪ್ಪನಿಗೆ ಆರೋಪಿ ಸಿದ್ದಪ್ಪ ಅವರು ಕೊಲೆ ಮಾಡುವ ಉದ್ದೇಶದಿಂದ ಕುಡುಗೋಲಿನಿಂದ ಹೊಡೆದ ಸ್ಥಳ ಎಂದು ತೋರಿಸಿದನು ಎನ್ನುವುದು ಸರಿಯಲ್ಲ. ಆ ಸ್ಥಳದಲ್ಲಿ ರಕ್ತ ಬಿದಿದ್ದು, ಅದನ್ನು ಪೋಲಿಸರೊಂದಿಗೆ ಬಂದಿದ್ದ ಅಧಿಕಾರಿಗಳು ಬ್ಯಾಂಡೇಜ್ ಬಟ್ಟೆಯಿಂದ ರಕ್ತ ವನ್ನು ಒರೆಸಿಕೊಂಡು ಪ್ಯಾಕ ಮಾಡಿ ಜಪ್ತು ಮಾಡಿಕೊಂಡು, ಅದರ ಮೇಲೆ ನನ್ನ ಸಹಿ ಮಾಡಿಸಿಕೊಂಡರು ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನಾನು ಸಹಿ ಮಾತ್ರ ಮಾಡಿದ್ದೇನೆ ಎಂದು ಹೇಳಿದ್ದಾರೆ.

2. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಖಾಕಿ ಬಣ್ಣದ ಒಂದು ಕವರ್ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಸಾಕ್ಷಿಯು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಆ ಭಾಂಗಿಯ ಮೇಲೆ ತನಿಖಾಧಿಕಾರಿಗಳ ಸೀಲು ಇರುತ್ತದೆ. ಅದನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿ ರಕ್ತ ಅಂಟಿರುವ ಬ್ಯಾಂಡೇಜ್ ಬಟ್ಟೆಯ ತುಂಡು ಇರುತ್ತದೆ. ಅದನ್ನು ಈಗಾಗಲೇ ಮು.ಮಾಃ 1 ಎಂದು ಗುರುತಿಸಲಾಗಿದೆ.

3. ಮಲ್ಲಿಕಾರ್ಜುನ ಸಿಂಗಾಡಿ ಅವರ ಖಾಲಿ ಜಾಗಕ್ಕೆ ಹೊಂದಿಕೊಂಡಿರುವ ರಸ್ತೆಯ ಮೇಲೆ ಪೋಲಿಸರು ಬೆಳಗ್ಗೆ 08:00– 09:00 ಗಂಟೆಯವರೆಗೆ ನಿಪಿ–10 ರಂತೆ ಟೈಪ ಮಾಡಿಸಿ ನಿಪಿ– 10[ಬಿ] ಪ್ರಕಾರ ನನ್ನ ಸಹಿ ತೆಗೆದುಕೊಂಡಿರುತ್ತಾರೆ ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ನಿಪಿ–3 ಪೋಟೊ ತೆಗೆಯಲಾಗಿದೆ ಎನ್ನುವುದಕ್ಕೆ ಸಾಕ್ಷಿ ಪೋಟೊ ತೆಗೆದಿದ್ದಾರೆ ಎಂದು ಹೇಳಿದ್ದಾರೆ. ನಿಪಿ–10 ನ್ನು ಸ್ಥಳದಲ್ಲಿ ನನ್ನ ಸಮಕ್ಷಮ ಮಾಡಿದ್ದು, ಎಲ್ಲಾ ವಿಚಾರಗಳನ್ನು ನನಗೆ ಓದಿ ಹೇಳಿದ್ದು, ನಾನು ಅದನ್ನು ತಿಳಿದುಕೊಂಡು ಸ್ಥಳದಲ್ಲಿಯೇ ನಾನು ಸಹಿ ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಆರೋಪಿಯ ಪರ ಶ್ರೀ.ಎಸ್.ಎನ್.ಪಿ ವಕೀಲರಿಂದ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.